34	Molkalmur to SH 19 (KSHIP 1 Road)	6
35	Bidar-Chincholi via Ekhelli (NH9)	61
36	Padubidri-Karkala	28
37	Kollegala-Tamilnadu Boarder via Hanur-MM Hills	97
38	Virajpet –Somawarpet via Madikere	71
Total Length (Kms)		**3,411**

770 ಶ್ರೀ ಶ್ರೀನಿವಾಸ್ ಎಂ. : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದ ಮೂಡದಿಂದ ನಿವೇಶನಗಳನ್ನು ಹಂಚಲು ಈ ಹಿಂದೆಯೇ ಅರ್ಜಿಗಳನ್ನು ಸ್ವೀಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; (ವಿವರಗಳನ್ನು ನೀಡುವುದು);

ಆ) ನಿವೇಶನಗಳನ್ನು ಹಂಚಲು ಸರ್ಕಾರ ಸ್ಥಳ ಗುರುತಿಸಿದೆಯೇ;

ಇ) ಹಾಗಿದ್ದಲ್ಲಿ, ಎಲ್ಲೆಲ್ಲಿ ಎಷ್ಟೆಷ್ಟು ಎಕರೆ ಸ್ಥಳವನ್ನು ಗುರುತಿಸಿದೆ; (ವಿವರಗಳನ್ನು ನೀಡುವುದು);

ಈ) ಗುರುತಿಸಿರುವ ಸ್ಥಳಗಳಲ್ಲಿ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದೇ;

ಉ) ಹಾಗಿದ್ದಲ್ಲಿ ಯಾವಾಗಿನಿಂದ ಹಂಚಿಕೆ ಮಾಡಲಾಗುವುದು?

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚಿಕೆ ಮಾಡಲು ಈ ಹಿಂದೆ ಅರ್ಜಿಗಳನ್ನು ಸ್ವೀಕರಿಸಿರುವುದಿಲ್ಲ. ಆದರೆ ನಿವೇಶನಗಳಿಗೆ ಬೇಡಿಕೆ ಸಮೀಕ್ಷೆಗಾಗಿ ಅರ್ಜಿ ಕರೆದಿದ್ದು, ಅದರಂತೆ ನಿವೇಶನ ಅಪೇಕ್ಷಿಸಿ ಒಟ್ಟು 29,880 ಅರ್ಜಿದಾರರಿಂದ ಬೇಡಿಕೆ ಬಂದಿರುತ್ತದೆ.

ಆ) ಗುರುತಿಸಿದೆ.

ಇ) ಕ್ಯಾತುಂಗೆರೆ ಗ್ರಾಮ ಸರ್ವೆ ನಂ.ಗಳಲ್ಲಿ 74ಎಕರೆ 07 ಗುಂಟೆ, ಹಾಲಹಳ್ಳಿ ಮತ್ತು ಗುತ್ತಲು ಗ್ರಾಮದ ಸರ್ವೆ ನಂ.ಗಳಲ್ಲಿ 132 ಎಕರೆ 21 ಗುಂಟೆ ಪ್ರದೇಶವನ್ನು ಗುರುತಿಸಿದೆ.

ಈ) ಗುರುತಿಸಿರುವ ಸ್ಥಳಗಳಲ್ಲಿ ಬಡಾವಣೆ ರಚನೆ ಮಾಡಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991ರ ನಿಯಮಾವಳಿಗಳಂತೆ ಹಂಚಿಕೆ ಮಾಡಲಾಗುವುದು.

ಉ) ವಸತಿ ಬಡಾವಣೆ ರಚನೆ ಮಾಡಿ, ಹಂಚಿಕೆ ಮಾಡಲು ಕ್ರಮವಹಿಸಲಾಗುವುದು.

458 ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕು ವೈದ್ಯನಾಥಪುರ–ಆಲೂರು ಸೇತುವೆಯು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸೇತುವೆಯ ಪುನರ್ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ವೈದ್ಯನಾಥಪುರ–ಆಲೂರು ಸೇತುವೆ ನಿರ್ಮಾಣಕ್ಕಾಗಿ ಸರ್ಕಾರ ಅಂದಾಜು ಪಟ್ಟಿ ತಯಾರಿಸಿದೆಯೇ;

ಈ) ಹಾಗಿದ್ದಲ್ಲಿ, ಈ ಸೇತುವೆ ಮರು ನಿರ್ಮಾಣಕ್ಕಾಗಿ ಸರ್ಕಾರ ನಿಗದಿಪಡಿಸಿದ ಅನುದಾನ ಮೊತ್ತವೆಷ್ಟು;

ಉ) ಈ ಸೇತುವೆಯ ಮರು ನಿರ್ಮಾಣ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಈ ಸೇತುವೆ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2ನೇ ಹಂತದ ಸೇತುವೆಯ ಯೋಜನೆಯ ಅಡಿಯಲ್ಲಿ 125 ಲಕ್ಷ ರೂ.ಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿತ್ತು. ಆದರೆ, ಸರ್ವೆ ಮತ್ತು ಮಣ್ಣಿನ ಪರೀಕ್ಷೆಯನ್ವಯ ಸೇತುವೆಯ ವಿನ್ಯಾಸ ಮಾಡಿ ಅಂದಾಜು ತಯಾರಿಸಿದಾಗ ಅಂದಾಜು ಮೊತ್ತವು 10 ಕೋಟಿ ರೂ.ಗಳಾಗುತ್ತವೆ. ಈ ಸೇತುವೆಯ ನಿರ್ಮಾಣವನ್ನು ಅನುದಾನದ ಲಭ್ಯತೆ ಮೇರೆಗೆ ತೆಗೆದುಕೊಳ್ಳಲು ಪರಶೀಲಿಸಲಾಗುತ್ತಿದೆ.

ಇ) ಈ ಸೇತುವೆಯ ನಿರ್ಮಾಣಕ್ಕೆ ಅಂದಾಜು ಪಟ್ಟಿಯನ್ನು 10.00 ಕೋಟಿ ರೂ.ಗಳಿಗೆ ತಯಾರಿಸಲಾಗಿದೆ.

ಈ) ಪರಿಶೀಲನೆಯಲ್ಲಿದೆ.